2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ
ಚಿಕ್ಕಮಗಳೂರು

ಸತ್ರ ಮೊಕದ್ದಮೆ ನಂಃ **102/2018**

| | | | |
|---|---|---|---|
| ಸಾಕ್ಷಿದಾರರ ಹೆಸರು | - ಲೋಕೇಶ್ | | ಪಿಡಬ್ಲೂ - 3 |
| ತಂದೆಯ ಹೆಸರು | - ರಾಮಪ್ಪ | | ಸಿಡಬ್ಲೂ - 4 |
| ವಯಸ್ಸು | - 35 ವರ್ಷ | | |
| ಉದ್ಯೋಗ | - ಕೂಲಿ | | |
| ವಾಸ ಸ್ಥಳ | - ದೊಡ್ಡಬುಕ್ಕಸಾಗರ, ಕಡೂರು ತಾಃ | | |

ದಿನಾಂಕಃ 18-02-2020 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಮಾನ್ಯ ವಿಶೇಷ ಪಿ.ಪಿ. ರವರಿಂದ -

1. ನನಗೆ ನ್ಯಾಯಾಲಯದ ಮುಂದಿರುವ ಆರೋಪಿಗಳ ಪರಿಚಯ ಇರುತ್ತದೆ. ಚಾಸಾ.7 ಚಿನ್ನಪ್ಪ ಇವರ ಪರಿಚಯ ಸಹ ಇರುತ್ತದೆ. ಸದರಿ ಚಿನ್ನಪ್ಪ ಇವರಿಗೆ ಇಬ್ಬರು ಗಂಡು ಮಕ್ಕಳು ಇರುತ್ತಾರೆ. ಅವರ ಹೆಸರು ಕುಮಾರ ಮತ್ತು ಮಂಜುನಾಥ.

2. ದಿಃ 14.05.2018 ರಂದು ನನ್ನನ್ನು ಮತ್ತು ಚಾಸಾ.5 ನಾಗರಾಜ್ ಇವರನ್ನು ಕಡೂರು ಪೊಲೀಸರು ಠಾಣೆಗೆ ಕರೆಸಿದ್ದರು. ನಾವು ಆ ದಿನ ಕಡೂರು ಪೊಲೀಸ್ ಠಾಣೆಗೆ ಬೆಳಿಗ್ಗೆ 6 ರಿಂದ 6.30 ಗಂಟೆ ಸಮಯದಲ್ಲಿ ಹೋಗಿರುತ್ತೇವೆ. ನಾವು ಠಾಣೆಗೆ ಹೋದ ಸಮಯದಲ್ಲಿ 1 ನೇ ಆರೋಪಿ ಪ್ರದೀಪ ಠಾಣೆಯಲ್ಲಿ ಇದ್ದನು. ಆಗ ಪೊಲೀಸರು ನನ್ನನ್ನು 1 ನೇ ಆರೋಪಿಯನ್ನು ತೋರಿಸಿ ಗುರುತಿಸಲು ತಿಳಿಸಿದರು, ಅದರಂತೆ ನಾನು ಸದರಿ ಆರೋಪಿ ನಮ್ಮ ಊರು ಮನೆಯವರೆಂದು ಪೊಲೀಸರಿಗೆ ತಿಳಿಸಿರುತ್ತೇನೆ. ಆ

ಸಮಯದಲ್ಲಿ 1 ನೇ ಆರೋಪಿ ಪ್ರದೀಪನು ಮೃತ ಮಂಜುನಾಥನು ತನ್ನ ಹೆಂಡತಿಯೊಡನೆ ಅಕ್ರಮ ಸಂಬಂಧ ಇಟ್ಟುಕೊಂಡಿದ್ದು ಅದನ್ನು ಬಿಡು ಎಂದು ಹೇಳಿದ್ದಕ್ಕೆ ಮೃತ ಮಂಜುನಾಥನು ಒಪ್ಪದೇ ಇದುದ್ದರಿಂದ ತಾನು ಮತ್ತು ತನ್ನ ಭಾವಮೈದ ಮಂಜುನಾಥ ಸೇರಿಕೊಂಡು ಮೃತ ಮಂಜುನಾಥನನ್ನು ಕೊಲೆ ಮಾಡಿರುವುದಾಗಿ ನನ್ನ ಸಮಕ್ಷಮ ಪೊಲೀಸರಿಗೆ ತಿಳಿಸಿದನು.

3. ನಂತರ ಪ್ರದೀಪನು ತನ್ನ ಭಾವಮೈದ ಮಂಜುನಾಥನ ಜೊತೆ ಸೇರಿ ಮೃತ ಮಂಜುನಾಥನ ಕುತ್ತಿಗೆಗೆ ಬೈಕ್ ನ ಕ್ಲಚ್ ವೈರ್ ನಿಂದ ಉಸಿರುಗಟ್ಟಿಸಿ ಕೊಲೆ ಮಾಡಿರುವುದಾಗಿ ತಿಳಿಸಿದನು. ಮೃತ ಮಂಜುನಾಥನನ್ನು ಕೊಲೆ ಮಾಡಿದ ನಂತರ ಆತನನ್ನು ತಮ್ಮ ಬೈಕ್ ನಲ್ಲಿ ತೆಗೆದುಕೊಂಡು ಹೋಗಿ ಜೋಗಿ ಕಣಿವೆ ಹತ್ತಿರ ಇರುವ ಪ್ಲಾಂಟೇಷನ್ ನಲ್ಲಿ ಮೃತ ಮಂಜುನಾಥನನ್ನು ಸುಟ್ಟು ಹಾಕಿರುವುದಾಗಿ ತಿಳಿಸಿದನು.

4. ನಂತರ ಆರೋಪಿ ಪ್ರದೀಪನು ತನ್ನನ್ನು ಸ್ಥಳಕ್ಕೆ ಕರೆದುಕೊಂಡು ಹೋದರೆ ಮೃತ ಮಂಜುನಾಥನನ್ನು ಸುಟ್ಟು ಹಾಕಿರುವ ಸ್ಥಳಕ್ಕೆ ಕರೆದುಕೊಂಡು ಹೋಗುತ್ತೇನೆ ಎಂದು ಹೇಳಿದ್ದರಿಂದ ನಾನು, ನಾಗರಾಜ, ಪೊಲೀಸರು ಮತ್ತು ಆರೋಪಿ ಪ್ರದೀಪ ಇವರೆಲ್ಲರು ಸೇರಿ ಪೊಲೀಸ್ ವಾಹನದಲ್ಲಿ ಜೋಗಿ ಕಣಿವೆ ಹತ್ತಿರ ಇರುವ ಪ್ಲಾಂಟೇಷನ್ ಗೆ ಹೋದೆವು. ಪ್ಲಾಂಟೇಷನ್ ಹತ್ತಿರ ಇರುವ ರಸ್ತೆಯಿಂದ ಸುಮಾರು 1 ವರೆ ಕಿ.ಮೀ ಪ್ಲಾಂಟೇಷನ್ ಒಳಗಡೆ ಜೀಪಿನಲ್ಲಿ ಹೋದೆವು. ನಂತರ ಪ್ರದೀಪನು ಮುಂದೆ ಜೀಪು

ಹೋಗುವುದಿಲ್ಲ ಎಂದು ಹೇಳಿದ್ದರಿಂದ ಸುಮಾರು 100 ಮೀಟರ್ ಒಳಗಡೆ ನಡೆದುಕೊಂಡು ಹೋದೆವು. ಅಲ್ಲಿ ಹೋಗಿ ಒಂದು ಸ್ಥಳವನ್ನು ತೋರಿಸಿ ಇದೇ ಸ್ಥಳದಲ್ಲಿ ನಾವು ಮೃತ ಮಂಜುನಾಥನನ್ನು ಸುಟ್ಟಿರುವುದಾಗಿ ತೋರಿಸಿದ್ದು, ನಾವು ಅಲ್ಲಿ ಅದನ್ನು ನೋಡಿದಾಗ ಒಂದು ಶವ ಸುಟ್ಟು ಕರಕಲಾಗಿ ಕೊಳತ ವಾಸನೆ ಬರುತ್ತಿತ್ತು. ಆ ಸಮಯದಲ್ಲಿ ನಾನು ಸದರಿ ಶವವನ್ನು ನೋಡಿದಾಗ ಶವದ ಕುತ್ತಿಗೆಯಲ್ಲಿ ಬೈಕ್ ಕ್ಲಚ್ ವೈರ್ ಕಂಡು ಬಂತು. ಶವದ ಬಲಗೈಯಲ್ಲಿ ಬೆಳ್ಳಿ ತರ ಕಾಣುವ ಒಂದು ಕಡಗ ಇತ್ತು. ಅದೇ ಕೈಯಲ್ಲಿ ಒಂದು ದಾರ ಇದ್ದು, ಅದು ಸುಟ್ಟು ಕಪ್ಪಗೆ ಆಗಿತ್ತು. ಅದೇ ರೀತಿ ಒಂದು ಪ್ಲಾಸ್ಟಿಕ್ ಕ್ಯಾನ್ ಇದ್ದು, ಅದು ಅರ್ಧಂಬರ್ಧ ಸುಟ್ಟು ಹೋಗಿದ್ದು ಅದು ಶವದ ಪಕ್ಕದಲ್ಲಿ ಇತ್ತು. ಸದರಿ ಶವ ಮತ್ತು ಶವ ಇದ್ದ ಸ್ಥಳವನ್ನು 1 ನೇ ಆರೋಪಿ ಪ್ರದೀಪನು ತೋರಿಸಿರುತ್ತಾನೆ.

5. ನಂತರ ವಿಷಯ ತಿಳಿದು ಸ್ಥಳಕ್ಕೆ ಮೃತ ಮಂಜುನಾಥನ ತಂದೆ ಚಿನ್ನಪ್ಪ ಮತ್ತು ಮೃತನ ಸಹೋದರ ಕುಮಾರ ಸ್ಥಳಕ್ಕೆ ಬಂದರು. ಸದರಿ ಚಿನ್ನಪ್ಪ ಮತ್ತು ಕುಮಾರ ಇವರು ಶವದ ಹಲ್ಲು, ಬಲಗೈಯಲ್ಲಿ ಇರುವ ಕಡಗ ಮತ್ತು ಧಾರವನ್ನು ನೋಡಿ ಗುರುತಿಸಿ, ಅದು ತಮ್ಮ ಮಗ ಮಂಜುನಾಥನದ್ದೆ ಶವ ಎಂದು ಗುರುತಿಸಿದರು.

6. ನಾವು ಠಾಣೆಯಿಂದ ಆ ದಿನ ಸ್ಥಳಕ್ಕೆ ಹೋದಾಗ ಸಮಯ ಬೆಳಿಗ್ಗೆ 7.30 ರಿಂದ 7.45 ಗಂಟೆ ಸಮಯವಾಗಿತ್ತು. ನಂತರ ಪೊಲೀಸರು ಶವ ದೊರೆತ ಮಹಜರ್ ನ್ನು ಮಾಡಿದ್ದು, ಸದರಿ ಮಹಜರ್ ಗೆ ನಮ್ಮ ಸಹಿಯನ್ನು ತೆಗೆದುಕೊಂಡಿರುತ್ತಾರೆ. ಸಾಕ್ಷಿಗೆ ಒಂದು ಮಹಜರ್ ನ್ನು ತೋರಿಸಿದ್ದು, ಅದು ಶವವನ್ನು ವಶಕ್ಕೆ ಪಡೆದ ಮಹಜರ್ ಆಗಿದ್ದು,

ಅದನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ. ಸದರಿ ಮಹಜರ್ ನ್ನು ನಿ.ಪಿ.3 ಎಂದು ಗುರುತಿಸಲಾಯಿತು ಮತ್ತು ಅದರ ಮೇಲೆ ಇರುವ ತನ್ನ ಸಹಿಯನ್ನು ಸಾಕ್ಷಿಯ ನೋಡಿ ಗುರುತಿಸಿದ್ದು, ಅದನ್ನು ನಿ.ಪಿ.3(ಎ) ಎಂದು ಗುರುತಿಸಲಾಯಿತು. ಆರೋಪಿ ಪ್ರದೀಪನ್ನು ಸದರಿ ಸ್ಥಳಕ್ಕೆ ನಮ್ಮನ್ನು ಮತ್ತು ಪೊಲೀಸರನ್ನು ಶವ ಇದ್ದ ಸ್ಥಳಕ್ಕೆ ಕರೆದುಕೊಂಡು ಹೋಗುವ ಸಮಯದಲ್ಲಿ ಮತ್ತು ಶವ ಇದ್ದ ಸ್ಥಳದಲ್ಲಿ ಪೊಲೀಸರು ಪೋಟೋಗಳನ್ನು ತೆಗೆದಿದ್ದು, ಅವುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ ಒಟ್ಟು 4 ಪೋಟೋಗಳನ್ನು ತೋರಿಸಿದ್ದು, ಮೊದಲ 2 ಪೋಟೋಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ಶವ ಇದ್ದ ಸ್ಥಳಕ್ಕೆ ಕರೆದುಕೊಂಡು ಹೋಗುವಾಗ ತೆಗೆದಿದ್ದು, ಅವುಗಳಲ್ಲಿ ತನ್ನ, ನಾಗರಾಜ್, ಆರೋಪಿ ಪ್ರದೀಪ ಮತ್ತು ಪೊಲೀಸರ ಇರುವಿಕೆಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಪೋಟೋಗಳನ್ನು ಕ್ರಮವಾಗಿ ನಿಪಿ.4 ಮತ್ತು 5 ಎಂದು ಗುರುತಿಸಲಾಯಿತು. ಸಾಕ್ಷಿಗೆ ಇನ್ನು ಎರಡು ಪೋಟೋಗಳನ್ನು ತೋರಿಸಿದ್ದು, ಅವುಗಳನ್ನು ಶವ ಇದ್ದ ಸ್ಥಳದಲ್ಲಿ ತೆಗೆದಿದ್ದು, ಅವುಗಳಲ್ಲಿ ತನ್ನ, ನಾಗರಾಜ್, ಆರೋಪಿ ಪ್ರದೀಪ, ಪೊಲೀಸರು ಮತ್ತು ಶವದ ಇರುವಿಕೆಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಪೋಟೋಗಳನ್ನು ಕ್ರಮವಾಗಿ ನಿಪಿ.6 ಮತ್ತು 7 ಎಂದು ಗುರುತಿಸಲಾಯಿತು.

7. ನಂತರ ನಾವು ಶವದಿಂದ ಸ್ವಲ್ಪ ದೂರದಲ್ಲಿ ನಿಂತುಕೊಂಡೆವು. ಆಗ ಪೊಲೀಸರು ನಮ್ಮನ್ನು ಕುರಿತು ಸತ್ತವನ ಹೆಸರು ಕೇಳಲಾಗಿ ಆತನು ಹೆಸರು ಮಂಜುನಾಥ ಎಂದು ನಾವು ಹೇಳಿದ್ದು, ಆತ ನಮ್ಮ

ಊರಿನವನು ಎಂದು ಹೇಳಿ ಗುರುತಿಸಿರುತ್ತೇವೆ. ಶವದ ಮೇಲೆ ಅರ್ಧ ಸುಟ್ಟು ಹೋದ ಸ್ವಲ್ಪ ಸ್ವಲ್ಪ ಟಿ.ಶರ್ಟು ಮತ್ತು ಬರುಮೋಡ ಚಡ್ಡಿ ಉಳಿದಿತ್ತು. ನಂತರ ಪೊಲೀಸರು ಒಂದು ದಾಖಲೆಗೆ ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ. ಸದರಿ ದಾಖಲೆಯು ಪೊಲೀಸರು ಸದರಿ ಸಾಕ್ಷಿಗೆ ನ್ಯಾಯಾಲಯದಲ್ಲಿ ಬಂದು ಸಾಕ್ಷಿ ಹೇಳಲು ನಮೂನೆ 144 ರನ್ವಯ ನೋಟೀಸು ನೀಡಿದ್ದು, ಅದನ್ನು ನಿ.ಪಿ.8 ಎಂದು ಗುರುತಿಸಲಾಯಿತು ಮತ್ತು ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿ.ಪಿ.8(ಎ) ಎಂದು ಗುರುತಿಸಲಾಯಿತು. ನಿ.ಪಿ.8 ಕ್ಕೆ ನಾನು ಅಲ್ಲದೇ ಈರಪ್ಪ ಮತ್ತು ನಾಗರಾಜ್ ಎನ್ನುವವರು ಸಹಿ ಮಾಡಿರುತ್ತಾರೆ. ನಂತರ ಪೊಲೀಸರು ಶವದ ಮೇಲೆ ಇದ್ದ ಕಡಗ, ಧಾರ, ಕ್ಲಚ್ ವೈರ್ ಮತ್ತು ಶವದಿಂದ ಸ್ವಲ್ಪ ದೂರದಲ್ಲಿ ಇದ್ದ ನೈಲಾನ್ ಧಾರವನ್ನು ಪೊಲೀಸರು ವಶಪಡಿಸಿಕೊಂಡಿರುತ್ತಾರೆ. ಆ ಸಮಯದಲ್ಲಿ ಪೊಲೀಸರು ಒಂದು ದಾಖಲೆಗೆ ನಮ್ಮ ಸಹಿಯನ್ನು ಪಡೆದುಕೊಂಡಿರುತ್ತಾರೆ. ಸದರಿ ದಾಖಲೆಯು ಶವ ಮಹಜರ್ ಆಗಿದ್ದು, ಅದನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ.9 ಎಂದು ಗುರುತಿಸಲಾಯಿತು ಮತ್ತು ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿ.ಪಿ.9(ಎ) ಎಂದು ಗುರುತಿಸಲಾಯಿತು. ಸದರಿ ವಸ್ತುಗಳನ್ನು ಪೊಲೀಸರು ಒಂದು ಬಿಳಿ ಬಟ್ಟೆಯಲ್ಲಿ ಇಟ್ಟುಕೊಂಡು ಅದಕ್ಕೆ ಸೀಲು ಮಾಡಿರುತ್ತಾರೆ.

8. ನಂತರ ಸ್ಥಳಕ್ಕೆ ವೈದ್ಯರು ಬರುವ ಕುರಿತು ಪೊಲೀಸರು ಮಾತನಾಡಿಕೊಳ್ಳುತ್ತಿದ್ದರು. ಶವ ಮಹಜರ್ ನ್ನು ಪೊಲೀಸರು ಬೆಳಿಗ್ಗೆ 8.30 ರಿಂದ 9.30 ಗಂಟೆ ವರೆಗೂ ಮಾಡಿರುತ್ತಾರೆ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ವಿಶೇಷ ಅಭಿಯೋಜಕರು ಅನುಮತಿ ಕೇಳಿರುತ್ತಾರೆ ದಾಖಲೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)

<u>ಪಾಟೀ ಸವಾಲು ಮಾನ್ಯ ಅಭಿಯೋಜಕರಿಂದಃ-</u>

9. ದಿಃ 14.05.2018 ರಂದು 8.45 ರಿಂದ 9.00 ಗಂಟೆ ಸಮಯದಲ್ಲಿ ನಾನು, ನಾಗರಾಜ್ ಮತ್ತು ಈರಪ್ಪ ಇವರುಗಳು ಶವದಿಂದ ಸುಮಾರು 50 ಅಡಿ ಅಂತರದಲ್ಲಿ ನಿಂತಿದ್ದೆವು ಎಂದರೆ ಸರಿ. ಆಗ ಪೊಲೀಸರು ನಮ್ಮಲ್ಲಿಗೆ ಬಂದು ಶವ ತನಿಖಾ ವರದಿಯನ್ನು ಮಾಡುತ್ತೇವೆ ನೀವು ಸಹಕರಿಸಿ ಎಂದು ನಮ್ಮನ್ನು ಕೇಳಿದರು ಎಂದರೆ ಸರಿ. ಶವ ಇದ್ದ ಸ್ಥಳವು ಜೋಗಿ ಕಣಿವೆ ಧಟ್ಟವಾದ ಅರಣ್ಯವಿದ್ದ ಸ್ಥಳ ಎಂದರೆ ಸರಿ. ನಂತರ ನಮ್ಮ 3 ಜನರನ್ನು ಶವದ ಹತ್ತಿರ ಕರೆದುಕೊಂಡು ಹೋಗಿ ಶವದ ಮೇಲೆ ಏನೇನು ಗಾಯಗಳು ಆಗಿರುತ್ತವೆ ಮತ್ತು ಶವದ ಮೇಲೆ ಏನೇನು ವಸ್ತುಗಳು ಇದ್ದವು ಎಂಬುದನ್ನು ಪೊಲೀಸರು ನಮ್ಮ ಸಮಕ್ಷಮ ಪರಿಶೀಲಿಸಿದರು ಎಂದರೆ ಸರಿ. ಅದೇ ರೀತಿ ಪೊಲೀಸರು ಆರೋಪಿ ಪ್ರದೀಪನ ಸ್ವಇಚ್ಛಾ ಹೇಳಿಕೆಯ ಮೇರೆಗೆ ಶವವನ್ನು ಗುರುತು ಮಾಡಿ ನಮ್ಮ ಸಮಕ್ಷಮ ಶವ ತನಿಖಾ ವರದಿಯನ್ನು ಮಾಡಿರುತ್ತೇವೆ ಎಂದು ಅದರಲ್ಲಿ ಬರೆದಿರುತ್ತಾರೆ ಎಂದರೆ ಸರಿ. ಸದರಿ ಶವ ತನಿಖಾ ವರದಿಯಲ್ಲಿ ಆರೋಪಿಗಳು ಸಾಕ್ಷ್ಯ ನಾಶ ಮಾಡುವ ಉದ್ದೇಶದಿಂದ ಮೃತ ಮಂಜುನಾಥನ ಶವವನ್ನು ಇಲ್ಲಿಗೆ ತಂದು ಸುಟ್ಟು ಹಾಕಿರುವುದಾಗಿ ಹೇಳಿದ್ದು, ಅದು ವರದಿಯಲ್ಲಿ ನಮೂದಾಗಿರುತ್ತದೆ ಎಂದರೆ ಸರಿ. ಸದರಿ ಶವ ತನಿಖಾ ವರದಿಯಲ್ಲಿ ಶವವನ್ನು ಯಾವ ಮಗ್ಗಲಿಗೆ ಮಲಗಿಸಿದರು ಮತ್ತು ಶವದ ಕಣ್ಣುಗಳು ಯಾವ ರೀತಿ ಸುಟ್ಟು

ಹೋಗಿದ್ದವು ಎನ್ನುವುದರ ಕುರಿತು ಬರೆದಿರುತ್ತಾರೆ ಎಂದರೆ ಸರಿ. ಶವದ ಕುತ್ತಿಗೆಯಲ್ಲಿ ಇದ್ದ ಕ್ಲಚ್ ವೈರ್ ನ್ನು ಪೊಲೀಸರು ತೆಗೆದುಕೊಂಡಿದ್ದು ಅದರ ಒಂದು ತುದಿಯಲ್ಲಿ ಬೋಲ್ಟ್ ಇದ್ದು ಅದಕ್ಕೆ ಇನ್ನೊಂದು ತುದಿಯನ್ನು ಕಟ್ಟಿ ಎಳೆದ ರೀತಿಯಂತೆ ಕಾಣಿಸುತ್ತಿದ್ದು ಅದನ್ನು ಸಹ ತನಿಖಾ ವರದಿಯಲ್ಲಿ ನಮೂದಿಸಿರುತ್ತಾರೆ ಎಂದರೆ ಸರಿ. ಅದೇ ಸಮಯದಲ್ಲಿ ಕಾಂತರಾಜ್ ಮತ್ತು ಜಯಣ್ಣ ಎಂಬುವವರನ್ನು ಸ್ಥಳಕ್ಕೆ ಕರೆಯಿಸಿ ಪೊಲೀಸರು ಅವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿ. ಸದರಿ ಸ್ಥಳದಲ್ಲಿ ಮೃತ ಮಂಜುನಾಥನು ತನ್ನ ಹೆಂಡತಿಗೆ ಲೈಂಗಿಕ ಕಿರುಕುಳ ಹಿನ್ನೆಲೆ ಕೊಡುತ್ತಿದ್ದ ಕಾರಣ ದ್ವೇಷದ ಕಾರಣ 1 ನೇ ಆರೋಪಿ ಪ್ರದೀಪನು ಆತನನ್ನು ಕೊಲೆ ಮಾಡಿರುವುದಾಗಿ ಜನರು ಮಾತನಾಡಿಕೊಳ್ಳುತ್ತಿದ್ದರು ಎಂದರೆ ಸರಿ. ಆ ದಿನ ಈ ಎಲ್ಲಾ ವಿಚಾರವನು ಬೆಳಿಗ್ಗೆ 9.00 ಗಂಟೆಗೆ ಬರೆದು ನಮಗೆ ಓದಿ ಹೇಳಿ ನಮ್ಮ ಸಹಿಯನ್ನು ತೆಗೆದುಕೊಂಡರು ಎಂದರೆ ಸರಿ.

<u>ಪಾಟೀ ಸವಾಲು ಶ್ರೀ ಎಂ.ಆರ್.ಜಿ. ವಕೀಲರಿಂದ – ಆರೋಪಿತರ ಪರವಾಗಿ</u>

10. ನಾನು 5 ನೇ ತರಗತಿ ವರೆಗೆ ವಿಧ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಕನ್ನಡ ಸ್ವಲ್ಪ ಸ್ವಲ್ಪ ಓದಲು ಬರುತ್ತದೆ. ನಾನು ಈ ದಿನ ನ್ಯಾಯಾಲಯಕ್ಕೆ ಬಂದಾಗ ನ್ಯಾಯಾಲಯದಲ್ಲಿ ಮೃತ ಮಂಜುನಾಥನ ತಂದೆ ಚೆನ್ನಪ್ಪ ಇದ್ದರು ಎಂದರೆ ಸರಿ. ನಾನು ಕಳೆದ 4-5 ವರ್ಷಗಳಿಂದ ಮೊಬೈಲ್ ಇಟ್ಟುಕೊಂಡಿದ್ದೇನೆ. ಅದರ ಸಂಖ್ಯೆ 8277377545 ಇರುತ್ತದೆ. ನನಗೆ ಚಾಸಾ.5 ನಾಗರಾಜ್ ಈತನ ಮೊಬೈಲ್ ಸಂಖ್ಯೆಯನ್ನು ಹೇಳಲು ಆಗುವುದಿಲ್ಲ ಮತ್ತು ಸದರಿ

ನಾಗರಾಜ್ ನ ಮೊಬೈಲ್ ಸಂಖ್ಯೆಯನ್ನು ಮಹಜರ್ ನಲ್ಲಿ ಬರೆದುಕೊಂಡ ಬಗ್ಗೆ ನನಗೆ ಗೊತ್ತಿಲ್ಲ. ಅದೇ ರೀತಿ ಈರಪ್ಪನ ಮೊಬೈಲ್ ನಂಬರ್ ನ್ನು ಸಹ ಮಹಜರ್ ನಲ್ಲಿ ಬರೆದುಕೊಂಡ ಬಗ್ಗೆ ನನಗೆ ಗೊತ್ತಿಲ್ಲ.

11. ದಿಃ 14.05.2018 ರಂದು ನಾವು ಬೆಳಗ್ಗಿನ ಜಾವ 6.00 ಗಂಟೆಗೆ ಪೊಲೀಸ್ ಠಾಣೆಗೆ ಹೋಗುವುದಕ್ಕಾಗಿ ನಮ್ಮ ಊರನ್ನು ಬಿಟ್ಟೆವು. ಆ ಸಮಯದಲ್ಲಿ ಚಾಸಾ.5 ನಾಗರಾಜ್ ಮತ್ತು ಈರಪ್ಪ ಊರಲ್ಲಿ ಇದ್ದರು. ದಿಃ 13.05.2018 ರಂದು ನಾವು ಕೂಲಿ ಕೆಲಸಕ್ಕೆಂದು ಕಡೂರಿಗೆ ಹೋಗಿದ್ದು, ನಂತರ ಅದೇ ದಿನ ಸಂಜೆ 6.00 ಗಂಟೆಗೆ ನಮ್ಮ ಊರಿಗೆ ವಾಪಸ್ಸು ಬಂದಿರುತ್ತೇವೆ. ನಾನು, ನಾಗರಾಜ, ಈರಪ್ಪ ಮತ್ತು ನ್ಯಾಯಾಲಯದ ಮುಂದಿರುವ ಆರೋಪಿಗಳು ಒಂದೇ ಊರಿನವರು ಎಂದರೆ ಸರಿ. ನಮ್ಮ ಗ್ರಾಮದಲ್ಲಿ ಸುಮಾರು 100 ರಿಂದ 120 ಮನೆಗಳು ಇರುತ್ತವೆ. ನನ್ನ ಮನೆಗೂ ಮತ್ತು 1 ನೇ ಆರೋಪಿಯ ಮನೆಗೂ ಸುಮಾರು 500 ಮೀಟರ್ ಅಂತರ ಇರುತ್ತದೆ ಮತ್ತು 2 ನೇ ಆರೋಪಿಯ ಮನೆಗೂ ಮತ್ತು ನಮ್ಮ ಮನೆಗೂ ಸುಮಾರು 50 ಮೀಟರ್ ಅಂತರ ಇರುತ್ತದೆ. ಪೊಲೀಸರು 1 ನೇ ಆರೋಪಿಯನ್ನು ಯಾವಾಗ ದಸ್ತಗಿರಿ ಮಾಡಿದರು ಎಂದು ನನಗೆ ಗೊತ್ತಿಲ್ಲ. ನಾವು ಗ್ರಾಮದಲ್ಲಿ ಇದ್ದಾಗ ಪೊಲೀಸರು ಬಂದರೆ ನಮಗೆ ಪೊಲೀಸರು ಬಂದ ವಿಚಾರ ಗೊತ್ತಾಗುತ್ತದೆ.

12. ದಿಃ 13.05.2018 ರಂದು ಸಂಜೆ 6.00 ಗಂಟೆ ಮೇಲೆ ನಮ್ಮ ಗ್ರಾಮಕ್ಕೆ ಪೊಲೀಸರು ಬಂದ ವಿಚಾರ ನನಗೆ ಗೊತ್ತಿಲ್ಲ. ನಮ್ಮ

ಊರಿಗೂ ಕಡೂರಿಗೂ ಸುಮಾರು 12 ಕಿ.ಮೀ ದೂರ ಇರುತ್ತದೆ. ನನ್ನನ್ನು ಚಾಸಾ.5 ನಾಗರಾಜ್ ಆ ದಿನ ಪೊಲೀಸ್ ಠಾಣೆಗೆ ಹೋಗೋಣ ಬಾ ಎಂದು ಕರೆದುಕೊಂಡು ಹೋಗಿರುತ್ತಾನೆ. ಸದರಿ ನಾಗರಾಜ್ ನನ್ನು ಬಿಟ್ಟರೆ ಬೇರೆ ಯಾರು ನನ್ನನ್ನು ಪೊಲೀಸ್ ಠಾಣೆಗೆ ಕರೆದುಕೊಂಡು ಹೋಗಿಲ್ಲ. ಆಗ ನನಗೆ ಪೊಲೀಸ್ ಠಾಣೆಗೆ ಏಕೆ ಹೋಗಬೇಕು ಎಂದು ಸಹ ಗೊತ್ತಿರಲಿಲ್ಲ. ನಾವು ಆ ದಿನ ನಾಗರಾಜ್ ನ ಟಿ.ವಿ.ಎಸ್. ಸ್ಟಾರ್ ಸಿಟಿ ಬೈಕ್ ನಲ್ಲಿ ಪೊಲೀಸ್ ಠಾಣೆಗೆ ಹೋಗಿರತ್ತೇವೆ. ಅದು ನಾಗರಾಜ್ ನ ಸ್ವಂತ ಬೈಕ್ ಆಗಿದ್ದು 4-5 ವರ್ಷಗಳಿಂದ ಇಟ್ಟುಕ್ಕೊಂಡಿರುತ್ತಾನೆ. ಅದರ ನಂಬರ್ ನನಗೆ ಗೊತ್ತಿರುವುದಿಲ್ಲ. ನಾವು ಆ ದಿನ ಪೊಲೀಸ್ ಠಾಣೆಗೆ ಹೋದಾಗ ಸಮಯ 6.30 ಗಂಟೆಯಾಗಿತ್ತು. ನನಗೆ ಎಸ್.ಪಿ. ಯಾರು, ಡಿ.ವೈ.ಎಸ್.ಪಿ. ಯಾರು, ಪಿ.ಎಸ್.ಐ ಯಾರು ಎಂದು ಗೊತ್ತಾಗುವುದಿಲ್ಲ, ಒಟ್ಟಿನಲ್ಲಿ ಪೊಲೀಸರು ಎಂದು ಗೊತ್ತಾಗುತ್ತದೆ. ಆ ದಿನ ಪೊಲೀಸ್ ಠಾಣೆಯಲ್ಲಿ ಯಾವ ಹುದ್ದೆಯ ಪೊಲೀಸರು ಇದ್ದರು ಎಂದು ನನಗೆ ಹೇಳಲು ಆಗುವುದಿಲ್ಲ. ನಾವು ಪೊಲೀಸ್ ಠಾಣೆಗೆ ಹೋಗುವ ಮುನ್ನ ಎಷ್ಟು ಸಮಯದಿಂದ ಪೊಲೀಸರು ಆರೋಪಿ ಪ್ರದೀಪನನ್ನು ಠಾಣೆಗೆ ಕರೆಸಿಕೊಂಡಿದ್ದರು ಎಂದು ನನಗೆ ಗೊತ್ತಿಲ್ಲ. ನಾವು ಠಾಣೆಗೆ ಹೋಗುವಕ್ಕಿಂತ ಮೊದಲು ಪೊಲೀಸರು ಪ್ರದೀಪನನ್ನು ಏನು ವಿಚಾರಣೆ ಮಾಡಿದ್ದರು ಎಂದು ನನಗೆ ಗೊತ್ತಿಲ್ಲ. ನಮ್ಮ ಮುಂದೆಯು ಸಹ ಪೊಲೀಸರು ಆರೋಪಿ ಪ್ರದೀಪನನ್ನು ವಿಚಾರಣೆ ಮಾಡಿರುವುದಿಲ್ಲ. ಆ ದಿನ ಪೊಲೀಸ್ ಠಾಣೆಯಲ್ಲಿ ಆರೋಪಿ ಪ್ರದೀಪ, ಪೊಲೀಸರು ಮತ್ತು ನಮ್ಮನ್ನು ಬಿಟ್ಟರೆ ಬೇರೆ ಯಾರು ಇರಲಿಲ್ಲ.

13. 2 ನೇ ಆರೋಪಿ ಮಂಜುನಾಥನನ್ನು ಪೊಲೀಸರು ಬೆಳಿಗ್ಗೆ 8.30 ಗಂಟೆ ಸಮಯದಲ್ಲಿ ಆತನ ಮನೆಯ ಹತ್ತಿರ ದಸ್ತಗಿರಿ ಮಾಡಿದ್ದು ನಾವು ಅದನ್ನು ಸುಮಾರು 50 ಮೀಟರ್ ದೂರದಲ್ಲಿ ನಿಂತು ನೋಡಿದ್ದೇನೆ. 2 ನೇ ಆರೋಪಿಯನ್ನು ದಸ್ತಗಿರಿ ಮಾಡುವಾಗ ನಾನು ಅವರ ಹತ್ತಿರಕ್ಕೆ ಹೋಗಿರುವುದಿಲ್ಲ. ಪೊಲೀಸ್ ಜೀಪು ಮತ್ತು ಪೊಲೀಸರ ಸಮವಸ್ತ್ರವನ್ನು ನೋಡಿ ಪೊಲೀಸರೇ ಬಂದಿದ್ದಾರೆ ಎಂದು ನಾನು ಅಂದುಕೊಂಡೆನು. ನಾನು ಆ ಸಮಯದಲ್ಲಿ ಪೊಲೀಸ್ ಜೀಪ್ ನಂಬರ್ ನೋಡಿರುವುದಿಲ್ಲ.

14. ನಾನು ಠಾಣೆಗೆ ಹೋದ ನಂತರ ಅಲ್ಲಿ ಪ್ರದೀಪನನ್ನು ಮಾತನಾಡಿಸಿರುತ್ತೇನೆ, ಆಗ ಸದರಿ ಪ್ರದೀಪನು ವಿಚಾರ ತಿಳಿಸಿದ್ದು ಅದನ್ನು ಮಹಜರ್ ನಲ್ಲಿ ಬರೆದುಕೊಂಡಿದ್ದು, ಅದನ್ನು ಈಗ ನನಗೆ ಮಹಜರ್ ನಲ್ಲಿ ಬರೆದಿರುವಂತೆಯೇ ಯಥಾವತ್ತಾಗಿ ಹೇಳಲು ಆಗುವುದಿಲ್ಲ, ಆದರೇ ಜನರಲ್ ಆಗಿ ಹೇಳಬಹುದು.

15. ಆ ದಿನ ನಾವು ಶವ ಇದ್ದ ಸ್ಥಳಕ್ಕೆ ಪೊಲೀಸ್ ವಾಹನದಲ್ಲಿ 3 ಜನ ಪೊಲೀಸರು, ಒಬ್ಬ ಡ್ರೈವರ್ ಮತ್ತು ಹಿಂದಿನ ಸೀಟಿನಲ್ಲಿ ನಾವು 3 ಜನ ಒಟ್ಟು 7 ಜನ ಹೋದೆವು. ಆ ದಿನ ನಮ್ಮ ಜೊತೆ ಬಂದ ಪೊಲೀಸರ ಹೆಸರನ್ನು ನನಗೆ ಈಗ ಹೇಳಲು ಆಗುವುದಿಲ್ಲ. ಪೊಲೀಸರು ತಮ್ಮ ಸಮವಸ್ತ್ರದ ಜೇಬಿನ ಹತ್ತಿರ ತಮ್ಮ ಹುದ್ದೆ ಮತ್ತು ಹೆಸರು ಇರುವ ನಾಮಫಲಕ ಧರಿಸಿದ್ದರು ಎಂದರೆ ಸರಿ. ಸದರಿ ನಾಮಫಲಕವು ಕನ್ನಡದಲ್ಲಿ ಇತ್ತು. ಆ ದಿನ ಪೊಲೀಸರು ತಮ್ಮ ಜೊತೆ ಏನು ವಸ್ತು ಮತ್ತು ಸಲಕರಣೆಗಳನ್ನು ಸ್ಥಳಕ್ಕೆ ತೆಗೆದುಕೊಂಡು

ಬಂದಿದ್ದರು ಎಂದರೆ ನನಗೆ ಗೊತ್ತಿಲ್ಲ. ನಾವು ಶವ ಇದ್ದ ಸ್ಥಳಕ್ಕೆ ಠಾಣೆಯಿಂದ ಹೋದ ರಸ್ತೆಗೆ ಏನು ಹೆಸರು ಇರುತ್ತದೆ ಎಂದು ಸದರಿ ಮಹಜರ್ ನಲ್ಲಿ ನಮೂದಿಸಿದ ಬಗ್ಗೆ ನನಗೆ ಗೊತ್ತಿಲ್ಲ. ಹೆದ್ದಾರಿ ಯಿಂದ ಜೋಗಿಕಣಿವೆ ಪ್ಲಾಂಟೇಷನ್ ಗೆ ಹೋಗಲು ಒಂದು ಕಚ್ಚಾ ರಸ್ತೆಯನ್ನು ಮಾಡಿರುತ್ತಾರೆ ಎಂದರೆ ಸರಿ. ಸದರಿ ಪ್ಲಾಂಟೇಷನ್ ಅರಣ್ಯ ಇಲಾಖೆಗೆ ಸೇರಿರುತ್ತದೆ ಎಂದರೆ ಸರಿ ಮತ್ತು ಅಲ್ಲಿ 24 ಗಂಟೆ ಅರಣ್ಯ ಸಿಬ್ಬಂಧಿಗಳು ಗಸ್ತು ಮಾಡುತ್ತಾರೆ ಎಂದರೆ ಸರಿ. ನಾವು ಜೋಗಿ ಕಣಿವೆ ಪ್ಲಾಂಟೇಷನ್ ಗೆ ಹೋಗುವ ದಾರಿಯಲ್ಲಿ ಅರಣ್ಯ ಇಲಾಖೆಯ ಚಕ್ ಪೋಸ್ಟ್ ಇರಲಿಲ್ಲ. ನಾವು ಕಚ್ಚಾ ರಸ್ತೆಯಿಂದ ಪ್ಲಾಂಟೇಷನ್ ಒಳಗಡೆ ಹೋಗುವ ಸಮಯದಲ್ಲಿ ಅರಣ್ಯ ಇಲಾಖೆಯ ಸಿಬ್ಬಂಧಿ ಇರಲಿಲ್ಲ. ಶವ ಇದ್ದ ಸ್ಥಳವನ್ನು ಗುರುತಿಸಲು ಪೊಲೀಸರು ಅರಣ್ಯ ಇಲಾಖೆಯ ಸಿಬ್ಬಂಧಿಯನ್ನು ಕರೆಸಿಕೊಂಡಿರುವುದಿಲ್ಲ. ನನಗೆ ಅಸ್ತಿಪಂಜರ ಯಾವುದು ಮತ್ತು ಶವ ಯಾವುದು ಎಂಬ ವ್ಯತ್ಯಾಸ ಗೊತ್ತಿರುತ್ತದೆ ಎಂದರೆ ಸರಿ. ನಿ.ಪಿ.4 ರಿಂದ 7 ಪೋಟೋಗಳಲ್ಲಿ ನಾನು, ನಾಗರಾಜ್, ಒಬ್ಬ ಪೊಲೀಸ್ ಮತ್ತು ಈಗ ನ್ಯಾಯಾಲಯದ ಮುಂದಿರುವ ಆರೋಪಿಗಳನ್ನು ಬಿಟ್ಟರೇ ಬೇರೆ ಯಾರು ಇರುವುದಿಲ್ಲ ಎಂದರೆ ಸರಿ. ನಿ.ಪಿ.4 ರಿಂದ 7 ಪೋಟೋಗಳಲ್ಲಿ ಇರುವ ಪೊಲೀಸರು ಯಾರು ಮತ್ತು ಅವರ ಹೆಸರು ನನಗೆ ಗೊತ್ತಿಲ್ಲ. ನಿ.ಪಿ.6 ಮತ್ತು 7 ಪೋಟೋಗಳಲ್ಲಿ ಕಂಡು ಬರುವ ವಸ್ತು ಶವ ಅಲ್ಲ, ಅದು ಕೇವಲ ಅಸ್ತಿಪಂಜರ ಎಂದರೆ ಸರಿ.

16. ಆ ದಿನ ನಾವು ಮಹಜರ್ ಗೆ ಹೋಗುವ ದಿನ ಆತನನ್ನು ಆತನ ಮನೆಯ ಹತ್ತಿರ ಹತ್ತಿಸಿಕೊಂಡು ಪೊಲೀಸರು ಕರೆದುಕೊಂಡು ಬಂದಿರುತ್ತಾರೆ. ಸದರಿ ಶವ ವಶಕ್ಕೆ ಪಡೆದ ಮಹಜರ್ ಮತ್ತು ಶವ

ಮಹಜರ್ ಮಾಡಿದ ದಿನದಂದು 2 ನೇ ಆರೋಪಿ ಮಂಜುನಾಥ ನಮ್ಮ ಜೊತೆ ಇರಲಿಲ್ಲ. ಪೊಲೀಸರು ದೊಡ್ಡ ಬುಕ್ಕ ಸಾಗರದಿಂದ 2 ನೇ ಆರೋಪಿ ಮಂಜುನಾಥನನ್ನು ಕರೆದುಕೊಂಡು ಹೋಗಿದ್ದು ಅದು ಯಾವ ದಿನ ಎಂದರೆ ನನಗೆ ಈಗ ನೆನಪಿಲ್ಲ. ದಿಃ 14.05.2018 ಕ್ಕೂ ಮೊದಲು ನಾವು ಪೊಲೀಸ್ ಠಾಣೆಗೆ ಹೋಗುವ ಮೊದಲು ನಮ್ಮ ಮೇಲೆ ಯಾವುದೇ ಕ್ರಿಮಿನಲ್ ಕೇಸು ಇದ್ದವಾ ಎಂದರೆ ಇರುವುದಿಲ್ಲ. ಅದೇ ರೀತಿ ದಿಃ 14.05.2018 ರಂದು ಅಥವಾ ಅದಕ್ಕೂ ಹಿಂದೆ ನಾನು ಯಾವುದೇ ವ್ಯಕ್ತಿಗಳ ಮೇಲೆ ಕಡೂರು ಠಾಣೆಗೆ ದೂರು ನೀಡಿರುವುದಿಲ್ಲ. ಈ ಪ್ರಕರಣವನ್ನು ಬಿಟ್ಟರೇ ಕಡೂರು ಪೊಲೀಸ್ ಠಾಣೆಯಲ್ಲಿ ಠಾಣೆಯ ದಾಖಲೆಗಳಲ್ಲಿ ನನ್ನ ಹೆಸರು ಮತ್ತು ವಿಳಾಸ ಇದ್ದ ಬಗ್ಗೆ ಯಾವುದೇ ದಾಖಲೆಗಳು ಇರುವುದಿಲ್ಲ. ನಾವು ಶವ ಇದ್ದ ಸ್ಥಳಕ್ಕೆ ಹೋದ ಸ್ವಲ್ಪ ಹೊತ್ತಿನಲ್ಲಿ ಇನ್ನೊಂದು ಪೊಲೀಸ್ ಜೀಪಿನಲ್ಲಿ ಮೃತನ ತಂದೆ ಚೆನ್ನಪ್ಪ, ಅಣ್ಣ ಕುಮಾರ, ಕಾಂತರಾಜ ಮತ್ತು ಜಯಣ್ಣ ಇವರು ಶವ ಇದ್ದ ಸ್ಥಳಕ್ಕೆ ಬಂದರು. ಇನ್ನೊಂದು ಪೊಲೀಸ್ ಜೀಪನ್ನು ಪೊಲೀಸರು ಚಾಲನೆ ಮಾಡಿಕೊಂಡು ಬಂದಿರುತ್ತಾರೆ. ಆ ಪೊಲೀಸರ ಹೆಸರು ನನಗೆ ಗೊತ್ತಿಲ್ಲ. ನಮ್ಮ ಜೊತೆ ಬಂದ 3 ಜನ ಪೊಲೀಸರು ಮತ್ತು ಇನ್ನೊಂದು ಜೀಪಿನಲ್ಲಿ ಬಂದ ಪೊಲೀಸರು ಸೇರಿ ಒಟ್ಟು 4 ಜನರಲ್ಲಿ ಒಬ್ಬ ಪೊಲೀಸ್ ಮತ್ತು ಸಮವಸ್ತ್ರದಲ್ಲಿ ಇದ್ದರು. ಸಮವಸ್ತ್ರದಲ್ಲಿ ಇದ್ದ ಪೊಲೀಸ್ ರವರ ಹೆಸರು ಮತ್ತು ಹುದ್ದೆ ನನಗೆ ಗೊತ್ತಿಲ್ಲ.

17. ಜೋಗಿ ಕಣಿವೆ ಪ್ಲಾಂಟೇಷನ್ ನಮ್ಮ ಊರಿನಿಂದ ಸುಮಾರು 3 ಕಿ.ಮೀ ದೂರ ಇರುತ್ತದೆ. ಪ್ಲಾಂಟೇಷನ್ ಪಕ್ಕದಲ್ಲಿ ಒಂದು

ಆಂಜನೇಯ ದೇವಸ್ಥಾನ ಇರುತ್ತದೆ. ಅದನ್ನು ಜೋಗಿ ಕಣಿವೆ ಆಂಜನೇಯ ಎಂದು ಕರೆಯುತ್ತಾರೆ. ಸದರಿ ಆಂಜನೇಯ ದೇವಸ್ಥಾನಕ್ಕೆ ನಮ್ಮ ಊರು ಮತ್ತು ಇತರೆ ಊರನ ಭಕ್ತರು ಬರುತ್ತಾರೆ ಎಂದರೆ ಸರಿ. ಆಂಜನೇಯ ದೇವಸ್ಥಾನಕ್ಕೆ ಬರುವ ಭಕ್ತರು ಪ್ಲಾಂಟೇಷನ್ ಗೆ ಹೋಗುವ ಕಚ್ಚಾ ರಸ್ತೆಯಲ್ಲಿ ಓಡುತ್ತಾರೆ ಎಂದರೆ ಸರಿಯಲ್ಲ. ಆದರೆ ಪ್ಲಾಂಟೇಷನ್ ರವರು ಸದರಿ ರಸ್ತೆಗೆ ಕಾವಲು ಇರುತ್ತಾರೆ, ಅದರಿಂದ ಜನರಿಗೆ ಅಲ್ಲಿ ಓಡಾಡಲು ಆಗುವುದಿಲ್ಲ. ಜೋಗಿ ಕಣಿವೆ ಪ್ಲಾಂಟೇಷನ್ ಸುತ್ತ ಮುತ್ತ ಇರುವ ಗ್ರಾಮದ ಜನರು ಕುರಿ, ಮೇಕೆ ಮತ್ತು ಹಸುಗಳನ್ನು ಸದರಿ ಪ್ಲಾಂಟೇಷನ್ ನಲ್ಲಿ ಮೆಯಿಸುತ್ತಾರೆ ಎಂದರೆ ಸರಿ. ಧಟ್ಟ ಅರಣ್ಯ ಪ್ರದೇಶ ಮತ್ತು ಕುರುಚಲು ಅರಣ್ಯ ಪ್ರದೇಶ ಎಂದರೆ ಗೊತ್ತಿರುತ್ತದೆ. ಧಟ್ಟ ಅರಣ್ಯ ಪ್ರದೇಶಗಳಲ್ಲಿ ಜನರು ಓಡಾಡುವುದಿಲ್ಲ ಎಂದರೆ ಸರಿ. ನಿ.ಪಿ.7 ಪೋಟೋದಲ್ಲಿ ಕಂಡು ಬರುವ ಅರಣ್ಯ ಪ್ರದೇಶವು ಕುರುಚಲು ಅರಣ್ಯ ಪ್ರದೇಶ ಎಂದರೆ ಸರಿ. ಸದರಿ ಅರಣ್ಯ ಪ್ರದೇಶದಲ್ಲಿ ಹುಲ್ಲು ಬೆಳೆದಿರುವುದರಿಂದ ಕುರಿ, ಹಸುಗಳನ್ನು ಮೇಯಿಸುತ್ತಾರೆ ಎಂದರೆ ಸರಿ.

18. ನಾವು ಶವ ಇದ್ದ ಸ್ಥಳಕ್ಕೆ ಹೋಗಿ ಸದರಿ ಸ್ಥಳದಲ್ಲಿ ಅಸ್ತಿಪಂಜರವನ್ನು ನೋಡಿದ್ದು, ಅದನ್ನು ಯಾವ ವ್ಯಕ್ತಿಯದ್ದು ಎಂದು ನಮಗೆ ಗುರುತಿಸಲು ಆಗುವುದಿಲ್ಲ ಎಂದರೆ ಸರಿ. ಶವದ ಕೈಯಲ್ಲಿ ಒಂದು ಕಡಗ ಇದ್ದು, ಅದು ಕಪ್ಪಾಗಿದ್ದು, ಅದು ಯಾವ ಲೋಹದಿಂದ ಮಾಡಿದ್ದು ಎಂದು ಗೊತ್ತಾಗುತ್ತಿರಲಿಲ್ಲ ಎಂದರೆ ಸರಿ

ಮತ್ತು ಸದರಿ ಕಡಗದ ಮೇಲೆ ಯಾವುದೇ ಗುರುತುಗಳು ಇರಲಿಲ್ಲ. ಸದರಿ ಅಸ್ತಿಪಂಜರವನ್ನು ನೋಡಿ ಮೃತನ ಅಣ್ಣ ಕುಮಾರ ಗುರುತಿಸಿದ್ದು, ಸದರಿ ಅಸ್ತಿಪಂಜರವು ತನ್ನ ತಮ್ಮ ಮಂಜುನಾಥನದ್ದು ಎಂದು ಸದರಿ ಅಸ್ತಿಪಂಜರದ ಹಲ್ಲು, ಕೈಯಲ್ಲಿ ಇದ್ದ ಕಡಗ ಮತ್ತು ದಾರ, ಸುಟ್ಟು ಹೋದ ಬರುಮೋಡ, ಹಣೆಯ ಮೇಲೆ ಇದ್ದ ಕೂದಲು, ಹಲ್ಲುಗಳು ಇವುಗಳ ಆಧಾರದ ಮೇಲೆ ಶವವನ್ನು ಗುರುತಿಸಿದ್ದು, ಅದನ್ನೇ ಮಹಜರ್ ನಲ್ಲಿ ನಮೂದಿಸಿರುತ್ತಾರೆ. ಸದರಿ ಮಹಜರ್ ನಲ್ಲಿ ಶವದ ಮೇಲೆ ಕೂದಲು, ಸುಟ್ಟು ಹೋದ ದಾರ, ಸುಟ್ಟು ಹೋದ ಬರುಮೋಡ ಮತ್ತು ಸುಟ್ಟು ಹೋದ ಬಟ್ಟೆ ಇವುಗಳನ್ನು ನಮೂದಿಸಿರುವುದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ಶವದ ಹತ್ತಿರ ಯಾವುದೇ ಸುಟ್ಟು ಹೋದ ಪ್ಲಾಸ್ಟಿಕ್ ಕ್ಯಾನ್ ಇರಲಿಲ್ಲ ಎಂದರೆ ಸರಿಯಲ್ಲ. ಶವ ಮಹಜರ್ ನಲ್ಲಿ ಅಸ್ತಿಪಂಜರದ ಬಾಯಿಯಲ್ಲಿ ಎಷ್ಟು ಹಲ್ಲುಗಳು ಇದ್ದವು ಎಂದು ಮಹಜರ್ ನಲ್ಲಿ ನಮೂದಿಸಿದ್ದಾರೆ ಎಂದು ನನಗೆ ಗೊತ್ತಿಲ್ಲ. ಶವ ಮಹಜರ್ ನಲ್ಲಿ ಅಸ್ತಿಪಂಜರವನ್ನು ನೋಡಿ ಯಾರು ಯಾರು ಯಾವ ಯಾವ ಆಧಾರದ ಮೇಲೆ ನೋಡಿ ಗುರುತಿಸಿದ್ದನ್ನು ಮಹಜರ್ ನಲ್ಲಿ ನಮೂದಿಸಿದ್ದು, ಅದನ್ನು ನನಗೆ ಈಗ ಹೇಳಲು ಆಗುವುದಿಲ್ಲ. ಶವ ಮಹಜರ್ ನಲ್ಲಿ ನಮೂದಿಸಿದ ಶವ ಇದ್ದ ಸ್ಥಳದ ಚಕ್ಕುಬಂದಿಯನ್ನು ಬರೆದಿದ್ದು, ಅದನ್ನು ನನಗೆ ಈಗ ಹೇಳಲು ಆಗುವುದಿಲ್ಲ. ಸದರಿ ಸ್ಥಳದಲ್ಲಿ 4 ಜನ ಪೊಲೀಸರು ಇದ್ದು, ಯಾರು ಶವ ಮಹಜರ್ ನ್ನು

ಬರೆದರು ಎಂದು ನನಗೆ ಹೇಳಲು ಆಗುವುದಿಲ್ಲ. ಅದೇ ರೀತಿ ಸದರಿ ಮಹಜರ್ ಯಾವ ಪೊಲೀಸ್ ಸಹಿ ಮಾಡಿರುತ್ತಾರೆ ಎಂದು ನನಗೆ ಹೇಳಲು ಆಗುವುದಿಲ್ಲ. ಸ್ಥಳದಲ್ಲಿಯೇ ಪೊಲೀಸರು ಮಹಜರ್ ಗೆ ಸಹಿ ಮಾಡಿದರೋ ಇಲ್ಲವೋ ನನಗೆ ಗೊತ್ತಿಲ್ಲ.

19. ದಿಃ 14.05.2018 ರಂದು ಬೆಳಿಗ್ಗೆ ನಾನು, ನಾಗರಾಜ ಠಾಣೆಗೆ ಹೋಗಿದ್ದು, ಅಲ್ಲಿ 1 ನೇ ಆರೋಪಿ ಪ್ರದೀಪ ಇದ್ದು, ಆತನು ಮೃತ ಮಂಜುನಾಥನ ಕೊಲೆ ವಿಚಾರವನ್ನು ಹೇಳಿದ್ದು, ನಂತರ ಅವನು ತೋರಿಸಿದಂತೆ ಜೋಗಿ ಕಣಿವೆ ಪ್ಲಾಂಟೇಷನ್ ಗೆ ಅವನ ಜೊತೆ ನಾವು ಮತ್ತು ಪೊಲೀಸರು ಪೊಲೀಸ್ ವಾಹನದಲ್ಲಿ ಹೋಗಿದ್ದು, ಅಲ್ಲಿ ಆರೋಪಿ ಪ್ರದೀಪನ್ನು ಶವ ಸುಟ್ಟ ಸ್ಥಳವನ್ನು ತೋರಿಸಿದ್ದು, ನಂತರ ಇನ್ನೊಂದು ಪೊಲೀಸ್ ವಾಹದಲ್ಲಿ ಬಂದ ಮೃತ ತಂದೆ ಮತ್ತು ಅಣ್ಣ ಬಂದು ಶವವನ್ನು ಗುರುತಿಸಿದ್ದು, ಅದರಂತೆ ಪೊಲೀಸರು ಶವವನ್ನು ವಶಕ್ಕೆ ಪಡೆದ ಮಹಜರ್ ನ್ನು ಮತ್ತು ಶವ ಮಹಜರ್ ನ್ನು ನಮ್ಮ ಸಮಕ್ಷಮ ಮಾಡಿ ನಮಗೆ ಅದರಲ್ಲಿ ಇರುವ ಸಂಗತಿಗಳನ್ನು ಓದಿ ಹೇಳಿ ಅವುಗಳಿಗೆ ನಮ್ಮ ಸಹಿಗಳನ್ನು ತೆಗೆದುಕೊಂಡಿರುತ್ತಾರೆ ಎಂದು ನಾನು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ನಾನು ಕೂಲಿ ಕೆಲಸಕ್ಕೆ ಹೋಗುತ್ತೇನೆ. ಮೃತ ಮಂಜುನಾಥನ ತಂದೆಗೆ ತೆಂಗು, ಅಡಿಕೆ ತೋಟ ಇರುತ್ತದೆ ಎಂದರೆ ಸರಿ. ನಾನು ಮತ್ತು ಇತರರು ಸದರಿ ಚೆನ್ನಪ್ಪ ಇವರು ಕೂಲಿಗೆ ಎಂದು ಕರೆದಾಗ ಅವರ ತೋಟಕ್ಕೆ ಕೂಲಿ ಕೆಲಸಕ್ಕೆ ಹೋಗುತ್ತೇವೆ. ನಾನು ಮತ್ತು ಸದರಿ ಚೆನ್ನಪ್ಪ ಇವರು ವಿಶ್ವಾಸದಿಂದ ಚೆನ್ನಾಗಿ ಇದ್ದೇವೆ ಎಂದರೆ ಸರಿ. ನಿ.ಪಿ.3 ಮತ್ತು 9 ಮಹಜರ್ ಗಳಿಗೆ ನಾನು ಮೃತ

ಮಂಜುನಾಥನ ತಂದೆ ಚಿನ್ನಪ್ಪ ಇವರು ಹೇಳಿದಂತೆ ಕಡೂರು ಪೊಲೀಸ್ ಠಾಣೆಯಲ್ಲಿಯೇ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಈ ದಿನವು ಕೂಡ ಸದರಿ ಚಿನ್ನಪ್ಪ ರವರು ನನ್ನನ್ನು ಅವರ ಪರವಾಗಿ ಸಾಕ್ಷಿ ಹೇಳಲು ನ್ಯಾಯಾಲಯಕ್ಕೆ ಕರೆದುಕೊಂಡು ಬಂದಿರುತ್ತಾರೆ ಎಂದರೆ ಸರಿಯಲ್ಲ. ಅದೇ ರೀತಿ ಪೊಲೀಸರು ನಾನು ಯಾವ ರೀತಿ ಸಾಕ್ಷಿ ಹೇಳಬೇಕೆಂದು ನನಗೆ ತರಬೇತಿ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ.

(ನ್ಯಾಯಾಲಯದ ಊಟದ ಸಮಯವಾಗಿದ್ದರಿಂದ ಪಾಟೀ ಸವಾಲನ್ನು ಮಧ್ಯಾಹ್ನ 2.45 ಕ್ಕೆ ಮುಂದೂಡಲಾಯಿತು)

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

(ಮಂಜುನಾಥ ಸಂಗ್ರೇಶಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ

ಮಾ.

ದಿನಾಂಕಃ 18-02-2020 ರಂದು ಸಾಕ್ಷಿಗೆ ಮಧ್ಯಾಹ್ನ 2.45 ಗಂಟೆಗೆ ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು ಶ್ರೀ ಎಂ.ಆರ್.ಜಿ. ವಕೀಲರಿಂದ – ಆರೋಪಿತರ ಪರವಾಗಿ

20. ಮಹಜರ್ ಮಾಡುವ ಸಮಯದಲ್ಲಿ ಪೊಲೀಸರು ಶವದ ಮೇಲೆ ಇದ್ದ ಕ್ಲಚ್ ವೈರ್, ಕಡಗ, ಸುಟ್ಟು ಹೋದ ದಾರ ಮತ್ತು ಇತ್ಯಾದಿಗಳನ್ನು ಒಂದು ಬಿಳಿ ಬಟ್ಟೆಯ ಚೀಲದಲ್ಲಿ ಹಾಕಿ ಸೀಲು ಮಾಡಿದ್ದು ಅದರ ಮೇಲೆ ಯಾವ ರೀತಿಯ ಸೀಲು ಮಾಡಿದರು ಎಂದು ನನಗೆ ಗೊತ್ತಿಲ್ಲ. ಅದೇ ರೀತಿ ಸದರಿ ಬಿಳಿ ಬಟ್ಟೆಯ ಚೀಲದ ಮೇಲೆ ಯಾವುದಾದರು ಚೀಟಿಯನ್ನು ಅಂಟಿಸಿದ್ದ ಬಗ್ಗೆ ನನಗೆ ಗೊತ್ತಿಲ್ಲ. ಆ ರೀತಿ ಪೊಲೀಸರು ಯಾವುದೇ ವಸ್ತುಗಳನ್ನು ಶವದ ಮೇಲಿಂದ ತೆಗೆದುಕೊಂಡು ಅವುಗಳನುನ ಬಿಳಿ ಬಟ್ಟೆಯಲ್ಲಿ ಹಾಕಿ ಸೀಲು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಜೋಗಿ ಕಣಿವೆಯಂತ ಕುರಚಲು ಕಾಡುಗಳು ಸುತ್ತಾ ಮುತ್ತಾ ಬೇಕಾದಷ್ಟು ಕಂಡು ಬರುತ್ತವೆ ಎಂದರೆ ಸರಿ. ನಿ.ಪಿ.4 ರಿಂದ 7 ಪೋಟೋಗಳಲ್ಲಿ ಇರುವ ಚಿತ್ರಣವನ್ನು ನೋಡಿ ಅದು ಇಂತಹುದೇ ಅರಣ್ಯ ಪ್ರದೇಶ ಎಂದು ಹೇಳಲು ಬರುವುದಿಲ್ಲ ಎಂದರೆ ಸರಿ. ನಾವು ಜೋಗಿ ಕಣಿವೆ ಪ್ರದೇಶಕ್ಕೆ ಹೋಗಿದ್ದು ಅಲ್ಲಿ ಪೊಲೀಸರು ಮಹಜರ್ ಮಾಡಿದ್ದು ಮತ್ತು ನಾವು ಜೋಗಿ ಕಣಿವೆ ಅರಣ್ಯ ಪ್ರದೇಶಕ್ಕೆ ಹೋಗಿಯೇ ಇಲ್ಲ ಎಂದರೆ ಸರಿಯಲ್ಲ. ನಿ.ಪಿ.8 ನಮೂನೆ 144 ರಲ್ಲಿ ನಾನು ಸಹಿ ಹಾಕುವಾಗ ಅದರಲ್ಲಿ ಏನು ಬರೆದಿತ್ತು ಎಂಬುದನ್ನು ಈಗ ನನಗೆ ಹೇಳಲು ಆಗುವುದಿಲ್ಲ. ಅಸ್ಥಿಪಂಜರವನ್ನು ನೋಡಿ ಗಾಯಗಳನ್ನು ಗುರುತಿಸಲು ಆಗುವುದಿಲ್ಲ ಎಂದರೆ ಸರಿ. ಶವ ಮಹಜರ್ ನಲ್ಲಿ

ಅಸ್ಥಿಪಂಜರದ ಮೇಲೆ ಆಗಿರುವ ಗಾಯಗಳ ಬಗ್ಗೆ ಬರೆದಿರುವುದಿಲ್ಲ ಎಂದರೆ ಸರಿ. ಶವದ ಬೆಂಗಾವಲಿಗೆ ಯಾರನ್ನು ನೇಮಿಸಿದ್ದರು ಮತ್ತು ಆ ಪೊಲೀಸರ ಹೆಸರು ಮತ್ತು ಅವರ ಪೇದೆ ಸಂಖ್ಯೆ ಯನ್ನು ಶವ ಮಹಜರ್ ನಲ್ಲಿ ಬರೆದಿರುವುದಿಲ್ಲ ಎಂದರೆ ಸರಿ.

21. ನಾನು ಠಾಣೆಗೆ ಹೋದ ಸಮಯದಲ್ಲಿ ಅಲ್ಲಿ ಇದ್ದ 1 ನೇ ಆರೋಪಿ ಪ್ರದೀಪನು ನನಗೆ ಮೃತ ಮಂಜುನಾಥನು ತನ್ನ ಹೆಂಡತಿಯ ಜೊತೆ ಅಕ್ರಮ ಸಂಬಂಧ ಇಟ್ಟುಕೊಂಡ ಬಗ್ಗೆ ಹೇಳಿಲ್ಲ ಎಂದರೆ ಸರಿಯಲ್ಲ. ಸ್ವಇಚ್ಛಾ ಹೇಳಿಕೆ ಎಂದರೆ ಸ್ವಂತ ಬುದ್ದಿ ಎಂದು ನನಗೆ ಅನಿಸುತ್ತದೆ. ಮಹಜರ್ ಗಳನ್ನು ಮಾಡುವ ಸಮಯದಲ್ಲಿ ಪೊಲೀಸರು ಒಟ್ಟು ಎಷ್ಟು ಪೋಟೋಗಳನ್ನು ತೆಗೆದಿರುತ್ತಾರೆ ಎಂದು ಹೇಳಲು ಆಗುವುದಿಲ್ಲ. ಶವ ವಶಕ್ಕೆ ಪಡೆದುಕೊಂಡ ಬಗ್ಗೆ ಮಾಡುವ ಮಹಜರ್ ಮತ್ತು ಶವ ಮಹಜರ್ ಮಾಡುವ ಕಾಲಕ್ಕೆ ನಮ್ಮನ್ನು ಮತ್ತು ಪೊಲೀಸರನ್ನು ಸೇರಿಕೊಂಡು ಅಲ್ಲಿ ಎಷ್ಟು ಜನರು ಇದ್ದರು ಎಂದು ಈಗ ನನಗೆ ಹೇಳಲು ಆಗುವುದಿಲ್ಲ. ನಿ.ಪಿ.4 ರಿಂದ 7 ಪೋಟೋಗಳನ್ನು ಬಿಟ್ಟು ಉಳಿದ ಪೋಟೋಗಳಲ್ಲಿ ಯಾರು ಯಾರು ಇದ್ದರು ಎಂಬುದನ್ನು ನನಗೆ ಹೇಳಲು ಆಗುವುದಿಲ್ಲ. ಮೃತ ಮಂಜುನಾಥನು ಸಾಯುವ ಪೂರ್ವದಲ್ಲಿ ಕೊನೆಯದಾಗಿ ಅವನನ್ನು ನೋಡಿದವರ ಬಗ್ಗೆ ನಿ.ಪಿ.9 ಶವ ಮಹಜರ್ ನಲ್ಲಿ ನಮೂದಿಸಿದ ಬಗ್ಗೆ ನನಗೆ ಗೊತ್ತಿಲ್ಲ. ಅದೇ ರೀತಿ ಮೃತ ಮಂಜುನಾಥನು ಸಾಯುವ ಪೂರ್ವದಲ್ಲಿ ಕೊನೆಯದಾಗ ಆತನು ಯಾರ ಜೊತೆಯಲ್ಲಿ ಇದ್ದ ಮತ್ತು ಯಾರ ಜೊತೆಯಲ್ಲಿ ಹೋದ ಬಗ್ಗೆ ನನಗೆ ಗೊತ್ತಿಲ್ಲ. ಶವ ಮಹಜರ್ ನ್ನು 8.30 ರಿಂದ 9.00 ಗಂಟೆ ವರೆಗೆ ಬರೆದಿದ್ದು ಸುಳ್ಳು ಎಂದರೆ ಸರಿಯಲ್ಲ.

22. ಶವ ಮಹಜರ್ ನಲ್ಲಿ ಯಾರು ಮೊದಲು ಅಸ್ಥಿಪಂಜರವನ್ನು ನೋಡಿದರು ಎನ್ನುವ ಕುರಿತು ಬರೆಯಲಾಗಿದ್ದು, ಅದರ ಬಗ್ಗೆ ನನಗೆ ಗೊತ್ತಿಲ್ಲ. ನಾನು ಜೋಗಿ ಕಣಿವೆ ಪ್ಲಾಂಟೇಷನ್ ನಲ್ಲಿ ಯಾವುದೇ ಅಸ್ಥಿಪಂಜರವನ್ನು ನೋಡಿಲ್ಲ ಮತ್ತು ಅಲ್ಲಿ ಪೊಲೀಸರು ನಮ್ಮ ಸಮಕ್ಷಮ ಶವ ಮಹಜರ್ ಮಾಡಿರುವುದಿಲ್ಲ, ಮೃತ ತಂದೆ ಚಿನ್ನಪ್ಪರವರು ನಮ್ಮನ್ನು ಪೊಲೀಸ್ ಠಾಣೆಗೆ ಕರೆದುಕೊಂಡು ಹೋಗಿದ್ದು, ಅಲ್ಲಿ ಪೊಲೀಸರು ತಯಾರು ಮಾಡಿದ್ದ ಶವ ಮಹಜರ್ ಗೆ ಠಾಣೆಯಲ್ಲಿಯೇ ಸಹಿ ಮಾಡಿದ್ದೇವೆ ಎಂದರೆ ಸರಿಯಲ್ಲ. ನಾನು ಸೇರಿದಂತೆ ಚಿನ್ನಪ್ಪ, ನಾಗರಾಜ ಮತ್ತು ಕುಮಾರ ಇವರೆಲ್ಲರು ಸೇರಿ ಆರೋಪಿಗಳಿಗೆ ಹೆದರಿಸಿ ಅವರನ್ನು ನಮ್ಮ ಊರನ್ನು ಬಿಡಿಸಿರುತ್ತೇವೆ ಎಂದರೆ ಸರಿಯಲ್ಲ. ಅವರನ್ನು ಹೆದರಿಸಿದ್ದರಿಂದ ಆರೋಪಿಗಳು ನಮ್ಮ ಊರು ಬಿಟ್ಟು ಹಿರೇಮಗಳೂರಿನಲ್ಲಿ ವಾಸವಿದ್ದಾರೆ ಎಂಬುದು ನನಗೆ ಗೊತ್ತಿಲ್ಲ. ನಾನು ಚಿನ್ನಪ್ಪ ಇವರೊಂದಿಗೆ ವಿಶ್ವಾಸ ಇದ್ದು, ಅವರು ಹೇಳಿದಂತೆ ಆರೋಪಿಗಳ ವಿರುದ್ಧ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)
ಓ.ಹೇ.ಕೇ.ಸ.ಇ.ಎ.ಒ.

Sd/-
(ಮಂಜುನಾಥ ಸಂಗ್ರೇಶಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಮಾ.